# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 548 |
| 2 | ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 11-12-2025 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಸ ಸಂಸ್ಕರಣೆಯ ಮೊದಲು ಕಸದ ವಿಂಗಡಣೆ (segregation) ಸರಿಯಾಗಿ ಆಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಇದರ ವಿರುದ್ಧ ತೆಗೆದುಕೊಂಡ ಕ್ರಮವೇನು; ಘಟಕದಿಂದ ಹೊರಬರುತ್ತಿರುವ ಹೊಗೆ / ಮಾಲಿನ್ಯಕ್ಕೆ ಸಂಬಂಧಿಸಿದಂತೆ ಕೆ.ಎಸ್.ಪಿ.ಸಿ.ಬಿ (ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ) ಕೊನೆಯ ಬಾರಿ ಪರಿಶೀಲನೆ ನಡೆಸಿದ ದಿನಾಂಕ ಯಾವುದು; | • ಬಂದಿದೆ.<br>• ತೆಗೆದುಕೊಂಡ ಕ್ರಮಗಳು:<br>• ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಘನತ್ಯಾಜ್ಯವನ್ನು ಹಸಿ ಒಣ ತ್ಯಾಜ್ಯ ಮತ್ತು ಗೃಹ ಹಾನಿಕಾರ ನೈರ್ಮಲ್ಯ ತ್ಯಾಜ್ಯವಾಗಿ ವಿಂಗಡಿಸಲು ಅಧಿಸೂಚನೆ ಹೊರಡಿಸಲಾಗಿದ್ದು, ಈ ಕುರಿತು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿರುತ್ತದೆ.<br>• ಪ್ರತಿ ವಾರ್ಡಿಗೆ ಇಬ್ಬರಂತೆ ಲಿಂಕ್‌ವರ್ಕ್ಸ್‌ಗಳನ್ನು ಸಾರ್ವಜನಿಕರಿಗೆ ಅರಿವು ಮೂಡಿಸಲು ನಿಯೋಜಿಸಿಕೊಳ್ಳಲಾಗಿರುತ್ತದೆ.<br>• ಐ.ಇ.ಸಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತ್ಯಾಜ್ಯ ವಿಂಗಡಣೆ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿರುತ್ತದೆ.<br>• ವಿಂಗಡಿಸಿ ನೀಡಿದ ತ್ಯಾಜ್ಯವನ್ನು ಪ್ರತ್ಯೇಕವಾಗಿ ಹಸಿ ಮತ್ತು ಒಣ ತ್ಯಾಜ್ಯಗಳಿಗೆ ಪ್ರಾಥಮಿಕ ಸಂಗ್ರಹಣಾ ವಾಹನಗಳನ್ನು ನಿಯೋಜಿಸಲಾಗಿರುತ್ತದೆ.<br>• ತ್ಯಾಜ್ಯ ವಿಂಗಡಿಸದೇ ಇರುವ ಸಾರ್ವಜನಿಕರಿಗೆ ದಂಡವನ್ನು ವಿಧಿಸಲಾಗುತ್ತಿರುತ್ತದೆ.<br>• ಕೊನೆಯ ಬಾರಿ ಪರಿಶೀಲನೆ ನಡೆಸಿದ ದಿನಾಂಕ: 15.11.2025. |
| ಆ) | ಘಟಕದ ಸುತ್ತಮುತ್ತಲಿನ ಪ್ರದೇಶದಲ್ಲಿ ವಾಯುಮಾಲಿನ್ಯ ಹೆಚ್ಚಿರುವ ಬಗ್ಗೆ ಸ್ಥಳೀಯರಿಂದ ಬಂದಿರುವ ದೂರುಗಳು ಎಷ್ಟು; | ಯಾವುದೇ ದೂರುಗಳು ಬಂದಿಲ್ಲ. |
| ಇ) | ನಗರದಲ್ಲಿ ಪ್ರತಿನಿತ್ಯ ಉತ್ಪತ್ತಿಯಾಗುವ ಒಟ್ಟು ಕಸದ ಪ್ರಮಾಣ ಎಷ್ಟು; ಅದರಲ್ಲಿ ಎಷ್ಟು ಪ್ರಮಾಣ ಈ ಘಟಕಕ್ಕೆ ಬರುತ್ತದೆ; ಹೆಚ್ಚುತ್ತಿರುವ ಕಸದ ಪ್ರಮಾಣವನ್ನು ತಗ್ಗಿಸಲು ರಾಜ್ಯ ಸರ್ಕಾರ ಹೊಸ (waste-to-energy) ಘಟಕಗಳನ್ನು ಸ್ಥಾಪನೆ ಮಾಡಲು ಯೋಚಿಸಿದೆಯೇ: | • ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಅಂದಾಜು 5600 ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿರುತ್ತದೆ.<br>• ಇದರಲ್ಲಿ ಸುಮಾರು 600 ಟಿಪಿಡಿ Refused Derived Fuel (RDF) ಅನ್ನು ಕಸದಿಂದ ವಿದ್ಯುತ್ ಉತ್ಪಾದನಾ ಘಟಕಕ್ಕೆ ಕಳುಹಿಸಲಾಗುತ್ತಿರುತ್ತದೆ.<br>• ಹೌದು. |

...2.

| | | |
|---|---|---|
| ಈ) | ತ್ಯಾಜ್ಯದಿಂದ ಪ್ರತಿದಿನ ಎಷ್ಟು ಮೆಗಾವಾಟ್ ಉತ್ಪಾದನೆ ಗುರಿ ಇದೆ; ಪ್ರಸ್ತುತ ಎಷ್ಟು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಆಗುತ್ತಿದೆ; ಇದರ ಸಮಗ್ರ audit ವರದಿ ಆಗಿದೆಯೇ? | • ಪ್ರಸ್ತುತ ಬಿಡದಿಯಲ್ಲಿ 11.5 ಮೆ.ವ್ಯಾಟ್ ತ್ಯಾಜ್ಯದಿಂದ ವಿದ್ಯುತ್ ಉತ್ಪಾದನಾ ಘಟಕ ಕಾರ್ಯನಿರ್ವಹಿಸುತ್ತಿದೆ.<br>• ಸಮಗ್ರ ಘನತ್ಯಾಜ್ಯ ನಿರ್ವಹಣೆಯ ಎರಡು ಪ್ಯಾಕೇಜ್‌ಗಳಲ್ಲಿ ಹೆಚ್ಚುವರಿಯಾಗಿ 37 ಮೆ.ವ್ಯಾಟ್ ವಿದ್ಯುತ್ ಉತ್ಪಾದನಾ ಗುರಿ ಇರುತ್ತದೆ.<br>• ಇಂಧನ ದಕ್ಷತೆ ಬ್ಯೂರೋ (BEE) ಪ್ರಕಾರ, ಇಂಧನ ಆಡಿಟ್ ನಡೆಸಲು ಸ್ಥಾವರವು COD ಯಿಂದ 03 ವರ್ಷಗಳನ್ನು ಪೂರ್ಣಗೊಳಿಸಿಲ್ಲ. |
| ಉ) | ಘಟಕದ ಕಾರ್ಯಾಚರಣೆಗಾಗಿ ಅಸಮರ್ಪಕ ಅಧಿಕಾರಿಗಳು ಅಥವಾ ಗುತ್ತಿಗೆದಾರರನ್ನು ಹೊಣೆಗಾರರನ್ನಾಗಿಸುವ ಕುರಿತು ಸರ್ಕಾರ ಕ್ರಮಕೈಗೊಂಡಿದೆಯೇ; ಈ ಯೋಜನೆಯ DPR (Detailed Project Report) ನಲ್ಲಿ ಉಲ್ಲೇಖಿತ ಅಂಶಗಳಲ್ಲಿ ಎಷ್ಟು ಜಾರಿಗೊಳಿಸಲಾಗಿದೆ; | • ಬಿಡದಿ ತ್ಯಾಜ್ಯದಿಂದ ಇಂಧನ ಉತ್ಪಾದಿಸುವ ಸ್ಥಾವರವು ಸಮರ್ಪಕ ಹಾಗೂ ಪರಿಣಾಮಕಾರಿ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.<br>• ಈ ಯೋಜನೆಯ DPR (Detailed Project Report) ನಲ್ಲಿನ ಎಲ್ಲಾ ಅಂಶಗಳನ್ನು ಜಾರಿಗೊಳಿಸಲಾಗಿದೆ: |
| ಊ) | ಯೂನಿಟ್ ಕಾರ್ಯಕ್ಷಮತೆ ಕುರಿತಂತೆ ಸರ್ಕಾರ ಯಾವುದೇ third party performance audit ನಡೆಸಿದೆಯೇ? (ವರದಿಯನ್ನು ನೀಡುವುದು) | • ಬಿಡದಿ ತ್ಯಾಜ್ಯದಿಂದ ಇಂಧನ ಸ್ಥಾವರವು ಇನ್ನೂ ಒಂದು ವರ್ಷ ಕಾರ್ಯಾಚರಣೆಯನ್ನು ಪೂರ್ಣಗೊಳಿಸಿಲ್ಲ.<br>• ನಿಯಮಗಳ ಪ್ರಕಾರ, ಮೂರು ವರ್ಷಗಳು ಪೂರ್ಣಗೊಂಡ ನಂತರ ಇಂಧನ ಲೆಕ್ಕಪರಿಶೋಧನೆಯನ್ನು ನಡೆಸಲಾಗುತ್ತದೆ ಮತ್ತು ಕಾರ್ಯಕ್ಷಮತೆಯ ಲೆಕ್ಕಪರಿಶೋಧನೆಯು ಸಹ ಅದರ ಭಾಗವಾಗಿದೆ. |

**ನಅಇ 540 ಎಂಎನ್‌ವೈ 2025 (ಇ)**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ